# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

# ಕೆ.ಆರ್.ನಗರ

**ಸಿ.ಸಿ. 1575/2019**

***ಸಿ ಡಬ್ಲೂ-4***

**ಪಿ.ಡಬ್ಲೂ-6**

| | | |
|---|---|---|
| ಸಾಕ್ಷಿದಾರರ ಹೆಸರು | - | ಲಕ್ಷ್ಮಮ್ಮ |
| ಗಂಡನ ಹೆಸರು | - | ಕಾಳಶೆಟ್ಟಿ |
| ವಯಸ್ಸು | - | 69 ವರ್ಷ |
| ಕೆಲಸ | - | ಗೃಹಿಣಿ |
| ವಾಸ | - | ಕೆ.ಆರ್.ನಗರ ಟೌನ್ |

**ಸಾಕ್ಷಿಯನ್ನು ದಿನಾಂಕ 18.11.2026 ರಂದು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ ಸ.ಸ.ಅ ವಕೀಲರು**

ಚಾಸಾ-1 ರಿಂದ 3, 5, 6 ಮತ್ತು ಆರೋಪಿತರು ನನಗೆ ಗೊತ್ತು. ಸುಮಾರು 7-8 ವರ್ಷಗಳ ಹಿಂದೆ ನಾನು ಮನೆಯೊಳಗೆ ಕೂತಿರುವಾಗ ಆರೋಪಿತರು ಚಾಸಾ.1 ರವರ ಮನೆಗೆ ಬಂದು ಹುಣಸೂರಿನ ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರಕರಣವನ್ನು ಹಿಂದೆ ತಗೆದುಕೊಳ್ಳಿ ಎಂದು ಚಾಸಾ.1 ರವರೊಡನೆ ಜಗಳ ತೆಗೆದು ಚಾಸಾ.1 ರವರಿಗೆ ಒಂದನೇ ಆರೋಪಿಗೆ ಚುಚ್ಚುವುದಾಗಿ ಬೆದರಿಕೆ ಹಾಕಿರುತ್ತಾರೆ. ನಾನು ಜಗಳವನ್ನು ಬಿಡಿಸಿರುತ್ತೇನೆ. ಅದೇ ರೀತಿ ನಾನು ಮತ್ತು ಚಾಸಾ.3 ರವರು ಸಮಾಧಾನ ಮಾಡಿರುತ್ತೇವೆ. ನಾನು ಈ ಕುರಿತು ನಾನು ಪೋಲೀಸರ ಬಳಿ ನನ್ನ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಸ.ಸ.ಅ ವಕೀಲರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು.**

**<u>ಪಾಟೀ ಸವಾಲುಃ</u>**

ನಾನು ಘಟನೆ ನೆಡೆದ ಒಂದು ವರ್ಷದ ಹಿಂದೆ ಕುವೆಂಪು ಬಡಾವಣೆಯ ಚಾಸಾ.1 ರವರ ಮನೆಯಲ್ಲಿ ಬಾಡಿಗೆಗೆ ಇದ್ದೆ ಎಂದರೆ ಸರಿ. ದಿನಾಂಕಃ 06.04.2018 ರಂದು ನಾನು ಮನೆಯ ಮುಂದೆ ಕುಳಿತಿದ್ದಾಗ ಆರೋಪಿತರು ಚಾಸಾ.1 ರವರ ಮನೆಯೊಳಗೆ ಏಕಾಏಕಿ ನುಗ್ಗಿ ಅವ್ಯಾಚ್ಯ ಪದಗಳಿಂದ ಬೈದರು ಎಂದರೆ ಸರಿ. ಹುಣಸೂರು ತಾಲ್ಲೂಕಿನ ಆರೋಪಿ ಶ್ರೀನಿವಾಸರ ಮಗ ನಾದ ದೀಲೀಪ ಚಾಸಾ.1 ರವರ ಮಗಳಾದ ಜಮುಳರನ್ನು ಕರೆದುಕೊಂಡು ಕೊಲೆ ಮಾಡಿದ್ದು, ಈ ಕುರಿತು ಚಾಸಾ.1 ರವರು ಆರೋಪಿತರ ವಿರುದ್ಧ ಪ್ರಕರಣವನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ಹುಣಸೂರಿನ ಪೋಲೀಸ್ ಠಾಣೆಯಲ್ಲಿ ಸಲ್ಲಿಸಿರುವ ಪ್ರಕರಣವನ್ನು ಹಿಂಪಡೆಯದಿದ್ದರೆ ನಿನ್ನನ್ನು ಚಾಕುವಿನಿಂದ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಆ ಸಮಯದಲ್ಲಿ ನಾನು ಹಾಗೂ ಚಾಸಾ.2 ಮತ್ತು 3 ರವರು ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿ. ಈ ಕುರಿತು ಅವರು ದೂರು ನೀಡಿರುತ್ತಾರೆ ಹಾಗೂ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ್ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ